ಈ) ಭಾರತ ಸಂವಿಧಾನದ 316ನೇ ಅನುಚ್ಛೇದದನ್ವಯ ಸದಸ್ಯರ ನೇಮಕಾತಿ ಮಾಡಲಾಗುತ್ತದೆ. ಈ ಅನುಚ್ಛೇದದಲ್ಲಿ ರಾಜ್ಯದ ಯಾವುದೇ ನಿರ್ದಿಷ್ಟ ಭೌಗೋಳಿಕ ಪ್ರದೇಶದ ವ್ಯಕ್ತಿಗಳನ್ನು ನೇಮಕ ಮಾಡುವ ಬಗ್ಗೆ ಅಸ್ಪದವಿರುವುದಿಲ್ಲ.

ಕೆ.ಪಿ.ಎಸ್.ಸಿ. ಆಯೋಗದಿಂದ ಎ ಮತ್ತು ಬಿ ಗುಂಪಿನ ಹುದ್ದೆಗಳ ಆಯ್ಕೆಯ ಬಗ್ಗೆ

16 (302): ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್ (ಕುಷ್ಟಗಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ಕೋರಿಕೆಯ ಮೇರೆಗೆ ಕರ್ನಾಟಕ ಲೋಕಸೇವಾ ಆಯೋಗ ಯಾವ ಯಾವ ಇಲಾಖೆಗಳ ಎ ಮತ್ತು ಬಿ ಗುಂಪಿನ ಹುದ್ದೆಗಳಿಗೆ ಅಂತಿಮ ಆಯ್ಕೆ ಪಟ್ಟಿ ಇನ್ನೂ ಪ್ರಕಟಿಸಬೇಕಿದೆ. ಹಾಗೂ

ಪ್ರಕಟಿಸದೆ ಇರುವುದಕ್ಕೆ ಕಾರಣಗಳೇನು; ಆಯ್ಕೆ ಇತ್ಯರ್ಥ ಸಮಸ್ಯೆ ಇನ್ನೂ ಎಷ್ಟು ದಿನಗಳಲ್ಲಿ ಬಗೆಹರಿಸಲಾಗುವುದು; (ವಿವರ ನೀಡುವುದು);

ಆ) ಕಳೆದ 3 ವರ್ಷಗಳಲ್ಲಿ ಯಾವ ಯಾವ ಇಲಾಖೆಗಳ ಆಯ್ಕೆ ಪಟ್ಟಿಯನ್ನು ಹುದ್ದೆವಾರು ಸರ್ಕಾರಕ್ಕೆ ಸಲ್ಲಿಸಿದೆ; ಈ ಹುದ್ದೆಗಳಿಗೆ ಆಯ್ಕೆಯಾದವರ ಜಾತಿ ಮತ್ತು ಅವರು ಆಯ್ಕೆಗಾಗಿ ನೀಡಿರುವ ವರ್ಗ ಯಾವುದು;

ಇ) ಅರ್ಹತೆ ಮತ್ತು ಪ್ರತಿಭೆ ಇದ್ದಾಗ್ಯೂ ಕೂಡ ಉತ್ತರ ಕರ್ನಾಟಕದ ಜಿಲ್ಲೆಗಳ ಅಭ್ಯರ್ಥಿಗಳು ಈ ಹುದ್ದೆಗಳ ಅವಕಾಶದಿಂದ ವಂಚಿತರಾಗುತ್ತಿರುವುದು ನಿಜವಲ್ಲವೇ; ಇದರ ನಿವಾರಣೆಗಾಗಿ ಸರ್ಕಾರದ ಕ್ರಮವೇನು?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) ಕೆಳಕಂಡ ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಬೇಕಾಗಿದೆ:

1) 1998 ಹಾಗೂ 1999ನೇ ಸಾಲಿನ ಗೆಜೆಟೆಡ್ ಪ್ರೊಬೆಷನರುಗಳ ಹುದ್ದೆಗಳಿಗೆ,
2) ಔಷಧ ನಿಯಂತ್ರಣ ಇಲಾಖೆಯ ಔಷಧ ಪರಿವೀಕ್ಷಕರು,
3) ವಾರ್ತಾ ಇಲಾಖೆಯ ಸಹ ನಿರ್ದೇಶಕರು,
4) ಮೀನುಗಾರಿಕೆ ಇಲಾಖೆಯ ಸಹ ನಿರ್ದೇಶಕರು,
5) ನಗರ ಯೋಜನಾ ಇಲಾಖೆಯ ಕಿರಿಯ ನಗರ ಯೋಜಕರು

1998ನೇ ಸಾಲಿನ ಗೆಜೆಟೆಡ್ ಪ್ರೊಬೆಷನರ್ಸ್ ಹುದ್ದೆಗಳ ಆಯ್ಕೆ ಪಟ್ಟಿಯನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದ್ದು ಅದರ ಆದೇಶವನ್ನು ನಿರೀಕ್ಷಿಸಲಾಗುತ್ತಿದೆ. 1999ನೇ ಸಾಲಿನ ಗೆಜೆಟೆಡ್ ಪ್ರೊಬೆಷನರ್ಸ್ ಹುದ್ದೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿತ್ವ ಪರೀಕ್ಷೆ ನಡೆಸಬೇಕಾಗಿರುತ್ತದೆ. ಇನ್ನಿತರ ಹುದ್ದೆಗಳ ಬಗ್ಗೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ. ಹಾಗೆಯೇ, ಈ ಹುದ್ದೆಗಳಿಗೆ ಆಯ್ಕೆ ಆಗಿರುವ ಅಭ್ಯರ್ಥಿಗಳ ಮೀಸಲಾತಿ ಬಗ್ಗೆ ಸಿಂಧುತ್ವ ಪ್ರಮಾಣ ಪತ್ರಗಳನ್ನು ನೀಡುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ.

ಆ) ಅನುಬಂಧದಲ್ಲಿ ನೀಡಲಾಗಿದೆ.

ಆಯ್ಕೆಯಾದವರ ಜಾತಿ/ವರ್ಗದ ವಿವರಗಳು ಹೀಗಿವೆ: ಪರಿಶಿಷ್ಟ ಜಾತಿ–93, ಪರಿಶಿಷ್ಟ ಪಂಗಡ–60, ಪ್ರವರ್ಗ–1–7, ಪ್ರವರ್ಗ–2ಎ–14, ಪ್ರವರ್ಗ–2ಬಿ–2, ಪ್ರವರ್ಗ–3ಎ–3, ಪ್ರವರ್ಗ–3ಬಿ–4, ಸಾಮಾನ್ಯ ವರ್ಗ–42.

ಇ) ಹುದ್ದೆಗಳ ಆಯ್ಕೆಯನ್ನು ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನಡೆಸಲಾಗುತ್ತಿದ್ದು, ಅದರಲ್ಲಿ ಅಭ್ಯರ್ಥಿಗಳು ಗಳಿಸುವ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದರಿಂದ ಯಾವುದೇ ಅಭ್ಯರ್ಥಿ ಆಯ್ಕೆ ಅವಕಾಶದಿಂದ ವಂಚಿತರಾಗುವುದಿಲ್ಲ.

ಅನುಬಂಧ

ಕ್ರ.ಸಂ.	ಇಲಾಖೆ	ಹುದ್ದೆ
1.	ನಗರ ಯೋಜನೆ	ನಗರ ಯೋಜನಾ ಸಹಾಯಕ
2.	ಕೈಗಾರಿಕೆ ಮತ್ತು ವಾಣಿಜ್ಯ	ಸಹಾಯಕ ನಿರ್ದೇಶಕರು
3.	ಮುಖ್ಯ ವಿದ್ಯುತ್ ಪರಿವೀಕ್ಷಣಾಲಯ	ಸಹಾಯಕ ವಿದ್ಯುತ್ ಪರಿವೀಕ್ಷಕರು
4.	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	ಪರಿವೀಕ್ಷಣಾಧಿಕಾರಿಗಳು
5.	ತಾಂತ್ರಿಕ ಶಿಕ್ಷಣ	ಹೀಟ್ ಪವರ್ ಟೆಕ್ನಾಲಜಿ ಉಪನ್ಯಾಸಕರು (ಬ್ಯಾಕ್ ಲಾಗ್)
6.	ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ	ಯುನಾನಿ ಉಪನ್ಯಾಸಕರು (ಬ್ಯಾಕ್ ಲಾಗ್) ಹೋಮಿಯೋಪತಿ ಉಪನ್ಯಾಸಕರು (ಬ್ಯಾಕ್ ಲಾಗ್)
7.	ಕೃಷಿ	ಸಹಾಯಕರ ಕೃಷಿ ನಿರ್ದೇಶಕರು
8.	ಕರ್ನಾಟಕ ಲೋಕಸೇವಾ ಆಯೋಗ	ಜೂನಿಯರ್ ಪ್ರೋಗ್ರಾಮರ್
9.	ಗಣಿ ಮತ್ತು ಭೂ ವಿಜ್ಞಾನ	ಭೂ ವಿಜ್ಞಾನಿ ರಸಾಯನ ಶಾಸ್ತ್ರಜ್ಞ
10.	ಉದ್ಯೋಗ ಮತ್ತು ತರಬೇತಿ	ಪ್ರಾಚಾರ್ಯರು ದರ್ಜೆ-2/ಉಪ ಪ್ರಾಚಾರ್ಯರು/ಸಹಾಯಕ ನಿರ್ದೇಶಕರು (ತರಬೇತಿ)/ಸಹಾಯಕ ಅಪ್ರೆಂಟಿಷಿಪ್ ಸಲಹೆಗಾರರು
11.	ವಾಸ್ತುಶಿಲ್ಪಿ	ಹಿರಿಯ ಸಹಾಯಕ ವಾಸ್ತುಶಿಲ್ಪಿ ಸಹಾಯಕ ವಾಸ್ತುಶಿಲ್ಪಿ
12.	ಮಾಹಿತಿ ತಂತ್ರಜ್ಞಾನ	ಸೀನಿಯರ್ ಪ್ರೋಗ್ರಾಮರ್ ಜೂನಿಯರ್ ಪ್ರೋಗ್ರಾಮರ್ ಪ್ರೋಗ್ರಾಮಿಂಗ್ ಅಸಿಸ್ಟೆಂಟ್/ ಜೂನಿಯರ್ ಕನ್ಸೋಲ್ ಆಪರೇಟರ್/ ಸೂಪರ್‌ವೈಸರ್
13.	ಸಾರ್ವಜನಿಕ ಗ್ರಂಥಾಲಯ	ಮುಖ್ಯ ಗ್ರಂಥಾಲಯಾಧಿಕಾರಿ
14.	ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವೆ	ಪಶು ವೈದ್ಯಾಧಿಕಾರಿಗಳು
15.	ಔಷಧ ನಿಯಂತ್ರಣ	ಔಷಧ ಪರಿವೀಕ್ಷಕರು ಫಾರ್ಮಾಸ್ಯುಟಿಕ್ಸ್ ಉಪನ್ಯಾಸಕರು

ಕ್ರ.ಸಂ.	ಇಲಾಖೆ	ಹುದ್ದೆ
16.	ವಾಣಿಜ್ಯ ತೆರಿಗೆ	ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು
17.	ತೋಟಗಾರಿಕೆ	ಸಹಾಯಕ ತೋಟಗಾರಿಕೆ ಅಧಿಕಾರಿಗಳು
18.	ಅರಣ್ಯ	ವಲಯ ಅರಣ್ಯಾಧಿಕಾರಿ
19.	ಬಂದರು ಮತ್ತು ಒಳನಾಡು ಜಲಸಾರಿಗೆ	ಕಿರಿಯ ಜಲಮೋಜಣಿದಾರರು ಬಂದರು ಅಧಿಕಾರಿ/ಉಪ ನಿರ್ದೇಶಕರು
20.	ಭಾಷಾಂತರ ನಿರ್ದೇಶನಾಲಯ	ಭಾಷಾಂತರಕಾರ
21.	ಪದವಿ ಪೂರ್ವ ಶಿಕ್ಷಣ	ವಿವಿಧ ವಿಷಯಗಳ ಉಪನ್ಯಾಸಕರು
22	ಕಾರ್ಖಾನೆ ಮತ್ತು ಬಾಯ್ಲರ್	ಬಾಯ್ಲರುಗಳ ಪರಿವೀಕ್ಷಕರುಗಳು
23.	ರೇಷ್ಮೆ	ರೇಷ್ಮೆ ವಿಸ್ತರಣಾಧಿಕಾರಿ
24.	ಕಾಲೇಜು ಶಿಕ್ಷಣ	ವಿವಿಧ ವಿಷಯಗಳ ಉಪನ್ಯಾಸಕರುಗಳು

ರಾಜ್ಯದಲ್ಲಿ ಪಡಿತರ ಆಹಾರ ಸಾಗಾಣಿಕೆಯ ವೆಚ್ಚದ ಬಗ್ಗೆ

17 (3) : ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯಾದಲ್ಲಿ ಪಡಿತರ ಆಹಾರ ಸಾಗಾಣಿಕೆಗೆ ಗೋದಾಮಿನಿಂದ ಪಡಿತರ ಕೇಂದ್ರಗಳಿಗೆ ಸಾಗಾಣಿಕ ವೆಚ್ಚವನ್ನು ಏಕರೂಪವಾಗಿ ನೀಡುವಂತೆ ಸರ್ಕಾರ ಆದೇಶೀಸಿದೆಯೇ; (ಏಕರೂಪ ಶುಲ್ಕ ನೀಡುವ ಸಂಬಂಧವಾಗಿ ವಿವರ ನೀಡುವುದು)

ಆ) ಈಗ ಸಾಗಾಣಿಕೆಗೆ ಕೊಡುತ್ತಿರುವ ದರ ಎಷ್ಟು; ಜಿಲ್ಲಾವಾರು ವಿವರ ನೀಡುವುದು)

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) ರಾಜ್ಯದಲ್ಲಿ ಆಹಾರ ಧಾನ್ಯಗಳ ಸಾಗಾಣಿಕೆಗೆ 2 ಹಂತದ ವ್ಯವಸ್ಥೆಯಿದ್ದು, ಮೊದಲನೆ ಹಂತದಲ್ಲಿ FCI ಗೋದಾಮುಗಳಿಂದ ಸಗಟು ನಾಮಿನಿದಾರರ ಗೋದಾಮುವರೆಗಿನ ಸಾಗಾಣಿಕೆ ಸಗಟು ಸಾಗಾಣಿಕೆ, ಇದಕ್ಕೆ ಸಂಬಂಧಪಟ್ಟಂತೆ 2003–04ನೇ ಸಾಲಿನ ಅಂತ್ಯದವರೆಗೆ ಸಗಟು ನಾಮಿನಿದಾರರು ಸಾಗಾಣಿಕೆಗೆ ತಮ್ಮದೇ ವ್ಯವಸ್ಥೆ ಮಾಡಿಕೊಳ್ಳಬೇಕಾಗಿದ್ದು, ಪ್ರಧಾನ ಸಗಟು ನಾಮಿನಿದಾರರಾದ KFCSC ಯಿಂದ ಟೆಂಡರ್ ಕರೆದು ದರಗಳನ್ನು ನಿಗದಪಡಿಸಿ ಆ ದರದಲ್ಲಿ ಪಾವತಿ ಮಾಡಲಾಗುತ್ತಿತ್ತು. ಆದರೆ ಸರ್ಕಾರದಿಂದ ನಿರ್ದಿಷ್ಟ ದರಗಳಲ್ಲಿ ಸಾಗಾಣಿಕೆ ವೆಚ್ಚವನ್ನು ಮರುಪಾವತಿ ಮಾಡಲಾಗುತ್ತಿತ್ತು. ಇದರಿಂದ ಸಗಟು ನಾಮಿನಿದಾರರು ತಮಗೆ ನಷ್ಟವಾಗುತ್ತಿದೆ ಎಂದು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು. 2ನೇ ಹಂತದಲ್ಲಿ ಆಹಾರಧಾನ್ಯಗಳನ್ನು ಸಗಟು ನಾಮಿನಿದಾರರ ಗೋದಾಮುಗಳಿಂದ ಗ್ರಾಮಾಂತರ ನ್ಯಾಯಬೆಲೆ ಅಂಗಡಿಗಳಿಗೆ ಸಾಗಾಣಿಕೆ ಮಾಡಲಾಗುತ್ತದೆ. ಇದಕ್ಕಾಗಿ ಜಿಲ್ಲಾಧಿಕಾರಿಗಳು ಜಿಲ್ಲಾವಾರು ತಾಲ್ಲೂಕುವಾರು ಟೆಂಡರ್ ಕರೆದು ದರಗಳನ್ನು ನಿಗದಿಪಡಿಸಲಾಗುತ್ತಿತ್ತು. ಇದರಲ್ಲಿ ಸಾಗಾಣಿಕೆ ವ್ಯವಸ್ಥೆ ಹಾಗು ದರಗಳು, ಪಾವತಿ ವಿಧಾನ ಮುಂತಾದವುಗಳು ಜಿಲ್ಲೆಯಿಂದ ಜಿಲ್ಲೆಗೆ ಹಾಗು ತಾಲ್ಲೂಕಿನಿಂದ ತಾಲ್ಲೂಕಿಗೆ ಭೌಗೋಳಿಕಗನುಗುಣವಾಗಿ ಬೇರೆ ಬೇರೆಯಾಗಿರುತ್ತಿತ್ತು.